**O.S. 476/2023  P W1**

**<u>ದಿನಾಂಕಃ   07/07 /2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.</u>**

**<u>ಮುಂದುವರಿದ  ಪಾಟೀಸವಾಲುಃ- ಶ್ರೀ ಹೆಚ್ ಎಲ್ ವಿ   ವಕೀಲರಿಂದ 2 ನೇ ವಾದಿಯ ಪರವಾಗಿ</u>**

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ  ಏನೇನು ಬರೆದಿದೆ ಎನ್ನುವುದು ನನಗೆ ಗೊತ್ತು.  ನಿಮ್ಮ  ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ   ದಾವಾ ಅನುಸೂಚಿಯ ಸ್ವತ್ತಿನ ಚೆಕ್ಕು ಬಂದಿಯನ್ನು ಬರೆಸಿಲ್ಲ ಎಂದರೆ ಸಾಕ್ಷಿಯು ಬರೆಯಿಸಿದ್ದೇನೆ ಎಂದು ನುಡಿಯುತ್ತಾರೆ. ಆ ರೀತಿ   ನಿಮ್ಮ  ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ  ದಾವಾ ಅನುಸೂಚಿ ಸ್ವತ್ತಿನ ಚೆಕ್ಕು ಬಂದಿಯನ್ನು ಬರೆಯಿಸದೇ ಇದ್ದರೂ  ಬರೆಯಿಸಿರುವುದಾಗಿ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿಯು ಬರೆಯಿಸಿದ್ದೇನೆ ಎಂದು ನುಡಿಯುತ್ತಾರೆ.

ದಾವಾ ಅನುಸೂಚಿ ಸ್ವತ್ತಿಗೆ ಸಂಬಂಧಪಟ್ಟಂತೆ ಏನೇನು ದಾಖಲೆಗಳು ನನ್ನ ಬಳಿ ಇದೆಯೋ  ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.  ನ್ಯಾಯಾಲಯದಲ್ಲಿ ನನ್ನ ಪರವಾಗಿ ನಿಶಾನೆಗೊಳಿಸಿರುವ ದಾಖಲೆಗಳನ್ನು ಹೊರತು ಪಡಿಸಿ ದಾವಾ ಅನುಸೂಚಿ ಸ್ವತ್ತಿಗೆ  ಸಂಬಂಧಪಟ್ಟ   ಯಾವುದೇ ದಾಖಲೆಗಳು ನನ್ನ ಬಳಿ ಇಲ್ಲ ಎಂದರೆ ಸರಿ .

ದಾವಾ ಅನುಸೂಚಿ ಸ್ವತ್ತಿಗೆ  ನೀವು  ಮಾಲೀಕ ಎಂದು ತೋರಿಸುವ ಯಾವುದೇ ದಾಖಲೆಯನ್ನು ನೀವು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ.  ನನ್ನ ತಂದೆಯಾಗಲೀ ಅಥವಾ ಪೂರ್ವಜರಾಗಲೀ   ದಾವಾ ಅನುಸೂಚಿ ಸ್ವತ್ತಿನ ಮಾಲೀಕರು ಎಂದು ತೋರಿಸಲು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ  ಸರಿಯಲ್ಲ, ಸಾಕ್ಷಿಯು ಮುಂದುವರಿದು ದಾಖಲೆಯನ್ನು ಹಾಜರುಪಡಿಸಿರುತ್ತೇನೆ.  ದಾವಾ ಅನುಸೂಚಿ ಸ್ವತ್ತು ನನ್ನ ತಂದೆಯಿಂದ ನನಗೆ ಬಂದಿರುವುದು   ಎಂದು ನುಡಿಯುತ್ತಾರೆ.

ನಿಮ್ಮ ತಂದೆಯಾಗಲೀ, ಪೂರ್ವಜರಾಗಲೀ ದಾವಾ ಅನುಸೂಚಿ ಸ್ವತ್ತಿನ ಮಾಲೀಕರು ಎಂದು ತೋರಿಸಲು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸದೇ ಇದ್ದರೂ ಹಾಜರುಪಡಿಸಿರುವುದಾಗಿ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿಯು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ.

ನಿಪಿ-3 ರಲ್ಲಿ ಕಾಣಿಸುತ್ತಿರುವ ಆರ್ ಸಿಸಿ ಮನೆ ನನ್ನದು. ಸದರಿ ಮನೆಯ ಎಡಭಾಗದಲ್ಲಿರುವ ತೆಂಗಿನ ಮರ ಹಾಗೂ ಆಸ್ತಿ ಮಲ್ಲೇಶಪ್ಪರವರಿಗೆ ಸೇರಿದ್ದು .ಬಲಭಾಗದಲ್ಲಿ ಕಾಣಿಸುತ್ತಿರುವ ಮನೆ ವೀರೇಶರವರಿಗೆ ಸೇರಿದ್ದು. ಸಾಕ್ಷಿಯು ಮುಂದುವರಿದು ಸದರಿ ವೀರೇಶರವರು ಮನೆ ನಿರ್ಮಾಣ ಮಾಡಿರುವ ಜಾಗ ಅವರಿಗೆ ಸೇರಿದ್ದು ಅಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ಮನೆ ನಿರ್ಮಾಣ ಮಾಡಿ ಸುಮಾರು 7 ರಿಂದ 8 ವರ್ಷಗಳಾಯಿತು 1 ನೇ ಪ್ರತಿವಾದಿ ಪಂಚಾಯಿತಿಯಿಂದ ಅನುಮತಿ ಹಾಗೂ ಸರ್ಕಾರದಿಂದ ಸಿಗುವ ಸೌಲಭ್ಯ ಪಡೆದು ಮನೆ ನಿರ್ಮಾಣ ಮಾಡಿರುವುದು ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಮನೆ ನಿರ್ಮಾಣ ಮಾಡಿರುವ ಸ್ವತ್ತಿನ ಕಂದಾಯ ದಾಖಲೆಗಳಲ್ಲಿ 1 ನೇ ಪ್ರತಿವಾದಿಯ ಹೆಸರು ನಮೂದು ಇದೆ ಎಂದರೆ ಸರಿ. ಆ ರೀತಿ 1 ನೇ ಪ್ರತಿವಾದಿಯ ಹೆಸರಿಗೆ ಯಾವ ಆಧಾರ ಮೇಲೆ ಕಂದಾಯ ದಾಖಲೆಗಳು ಬದಲಾವಣೆ ಆಗಿರುತ್ತದೆ ಎಂದು ನಾನು ತಿಳಿದುಕೊಳ್ಳಲು ಪ್ರಯತ್ನಿಸಿದ್ದೇನೆ ಸಾಕ್ಷಿಯು ಮುಂದುವರಿದು ಅಕ್ಕ ಪಕ್ಕದ ಮನೆಯವರಿಗೆ ಸಂಬಂಧಪಟ್ಟ ಮಾಹಿತಿಯನ್ನು ಕೊಡಲು ಬರುವುದಿಲ್ಲವೆಂದು ಹೇಳಿರುವುದಾಗಿ ನುಡಿಯುತ್ತಾರೆ. 1 ನೇ ಪ್ರತಿವಾದಿಯ ಹೆಸರಿನಲ್ಲಿ ಇರುವ ಕಂದಾಯ ದಾಖಲೆಗಳನ್ನು ಕೊಡಿ ಎಂದು ಕೇಳಿ ನಾನು ಗ್ರಾಮ ಪಂಚಾಯಿತಿಗೆ ಯಾವುದೇ ಅರ್ಜಿಯನ್ನು ಕೊಟ್ಟಿಲ್ಲ.

ನಿಪಿ-3 ರಲ್ಲಿ ಕಾಣಿಸುತ್ತಿರುವ ಮಲ್ಲೇಶಪ್ಪರವರಿಗೆ ಸೇರಿದ ಜಾಗ ಹಾಗೂ 1 ನೇ ಪ್ರತಿವಾದಿಯ ಮನೆ ಇರುವ ಮಧ್ಯದಲ್ಲಿ ಇರುವ ನಮ್ಮ ಜಾಗದ ಅಗಲ 21 ಅಡಿ ಅಗಲ ಆಗಿರುತ್ತದೆ. 1 ನೇ ಪ್ರತಿವಾದಿ ಮೊದಲಿಗೆ ಮನೆ ನಿರ್ಮಾಣ ಮಾಡಿರುವುದು . ನಂತರ ನಾವು ಮನೆಯನ್ನು ನಿರ್ಮಿಸಿರುವುದು. ನಾನು ನನ್ನ ಮನೆಯನ್ನು ನಿರ್ಮಿಸುವ ಸಮಯದಲ್ಲಿ ಪಂಚಾಯಿತಿಯಿಂದ ಪರವಾನಗೆಯನ್ನು ಪಡೆದುಕೊಂಡಿದ್ದೆನು. ಸದರಿ

ಪರವಾನಗೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ . ಅದನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

ಸದರಿ ಪರವಾನಗೆಯಲ್ಲಿ ನನ್ನ ಮನೆ ನಿರ್ಮಾಣ ಮಾಡುವ ಸಂದರ್ಭದಲ್ಲಿ ನನ್ನ ಮನೆಯ ಹಿಂದೆ ಮುಂದೆ ಹಾಗೂ ಅಕ್ಕ ಪಕ್ಕ ಎಷ್ಟು ಸೆಟ್ ಬ್ಯಾಕ್ ಬಿಟ್ಟು ಮನೆ ನಿರ್ಮಾಣ ಮಾಡಬೇಕು ಎಂದು ಷರತ್ತು ಎಂದರೆ ಸರಿ .

ನಿಪಿ-3 ರಲ್ಲಿ ಕಾಣಿಸುತ್ತಿರುವ ಹಸಿರು ಬಣ್ಣದ ಪೇಯಿಂಟ್ ಹೊಡೆದಿರುವ ಒಂದು ತುದಿಯಿಂದ ಇನ್ನೊಂದು ತುದಿಗೆ 15 ಅಡಿ ಇರುತ್ತದೆ. ನಿಪಿ-3 ರಲ್ಲಿ ಸದರಿ ಹಸಿರು ಪೇಯಿಂಟ್ ಹೊಡೆದಿರುವ ನಂತರ ಮಲ್ಲೇಶಪ್ಪರವರ ಜಾಗದ ಕಡೆಗೆ ನಮ್ಮ ಮನೆಯ ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ ಎಂದರೆ ಸರಿ. ಸದರಿ ಮೆಟ್ಟಿಲು 4 ಅಡಿ ಅಗಲ ಇರುತ್ತದೆ.

ನಿಪಿ-3 ರಲ್ಲಿ ಕಾಣಿಸುತ್ತಿರುವ ಪ್ರಕಾರ ನೀವು 1 ನೇ ಪ್ರತಿವಾದಿಯ ಮನೆಯ ಕಡೆಗೆ ಸದರಿ ಹಸಿರು ಬಣ್ಣದ ಪೇಯಿಂಟ್ ಹೊಡೆದಿರುವ ತುದಿಯವರೆಗೆ ಮನೆಯನ್ನು ನಿರ್ಮಿಸಿದ್ದೀರಿ ಎಂದರೆ ಸಾಕ್ಷಿಯು ಇಲ್ಲ ಓಣಿ ಬಿಟ್ಟಿರುತ್ತೇವೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯ ಮನೆಯ ಕಡೆಗೆ ನಮ್ಮ ಮನೆಯ ಹಸಿರು ಪೇಯಿಂಟ್ ನ ತುದಿಯಿಂದ 3 ಅಡಿ ಓಣಿ ಬಿಟ್ಟಿರುತ್ತೇವೆ. ಪ್ರಸ್ತುತ ಸದರಿ ಹಸಿರು ಬಣ್ಣದ ತುದಿಯಿಂದ 1 ನೇ ಪ್ರತಿವಾದಿಯ ಮನೆಯವರೆಗೆ 4 ಅಡಿ ಓಣಿ ಇರುತ್ತದೆ. 1 ನೇ ಪ್ರತಿವಾದಿ ಮನೆಯನ್ನು ನಿರ್ಮಿಸುವಾಗ ನಮ್ಮ ಮನೆಯ ಕಡೆ ಸೆಟ್ ಬ್ಯಾಕ್ ಬಿಟ್ಟು ನಿರ್ಮಿಸಿರುತ್ತಾರೆ ಎಂದರೆ ಸರಿಯಲ್ಲ. ಆ ರೀತಿ 1 ನೇ ಪ್ರತಿವಾದಿ ಮನೆ ನಿರ್ಮಣ ಮಾಡುವ ಸಮಯದಲ್ಲಿ ಅವರು ಸೆಟ್ ಬ್ಯಾಕ್ ಬಿಟ್ಟು ಮನೆ ನಿರ್ಮಾಣ ಮಾಡುತ್ತಿಲ್ಲ ಎಂದು ಪಂಚಾಯಿತಿಗೆ ದೂರನ್ನು ಕೊಟ್ಟಿಲ್ಲ.

ನಿಪಿ-3 ರಲ್ಲಿ ಕಾಣಿಸುತ್ತಿರುವ ನಮ್ಮ ಮನೆಯ ಉದ್ದ 42 ಅಡಿ . ನಮ್ಮ ಮನೆಯ ಕಟ್ಟಡದ ಮುಂಭಾಗದ ತುದಿಯಿಂದ ನಮ್ಮ ಸ್ವತ್ತಿನ ಪೂರ್ವ ದಿಕ್ಕಿಗೆ ಇರುವ ರಸ್ತೆಯ ಅಂಚಿನವರೆಗೆ 15 ಅಡಿ ಜಾಗ ಇರುತ್ತದೆ. ಹಾಗಾದರೆ ನಾವು ನಿರ್ಮಿಸಿರುವ

ಮನೆ ಹಾಗೂ ಸದರಿ ಖಾಲಿ ಜಾಗ ಸೇರಿಸಿದರೆ 57 ಅಡಿ ಆಗುತ್ತದೆ ಎಂದರೆ ಸರಿ .

ನನ್ನ ಮನೆಯ ಹಿಂಭಾಗ ನನ್ನ ಚಿಕ್ಕಪ್ಪನಿಗೆ ಸೇರಿದ ಆಸ್ತಿ ಇದೆ ಎಂದರೆ ಸರಿ. ಅದರ ವಿಸ್ತೀರ್ಣ 21 ಇಂಟು 57 ಆಗಿರುತ್ತದೆ. ನಿಮ್ಮ ಪೂರ್ವಜರ ಆಸ್ತಿಯ ಹಾಗೂ ರಸ್ತೆಯ ಮಧ್ಯದಲ್ಲಿ ಸರ್ಕಾರಿ ಬಾವಿ ಎಂದು ದಾಖಲೆಗಳಲ್ಲಿ ನಮೂದು ಇತ್ತು ಎಂದರೆ ಸಾಕ್ಷಿಯು ನಾನು ಹಳೆಯ ದಾಖಲೆಗಳನ್ನು ನೋಡಿಲ್ಲ ಆದರೆ ಬಾವಿ ಇತ್ತು ಎಂದು ನುಡಿಯುತ್ತಾರೆ ಈಗ ಅಲ್ಲಿ ಬಾವಿ ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿ . ಈಗ ನಿಮಗೆ ಹಾಗೂ ನಿಮ್ಮ ಚಿಕ್ಕಪ್ಪನಿಗೆ ಇದೆ ಎನ್ನುವ ತಲಾ 57 ಅಡಿ ಉದ್ದದ ಜಾಗ ಇದೆ ಎಂದು ಹೇಳುವಷ್ಟು ಜಾಗ ನಿಮ್ಮ ಪೂರ್ವಜರಿಗೆ ಇರಲಿಲ್ಲ, ಸದರಿ ಬಾವಿಯನ್ನು ಕಬಳಿಸಿಕೊಂಡು ಪಂಚಾಯಿತಿ ಅಧಿಕಾರಿಗಳೊಂದಿಗೆ ಶಾರೀಕಾಗಿ ದಾಖಲೆಗಳನ್ನು ನಿಮ್ಮ ಪೂರ್ವಜರು ಸೃಷ್ಟಿಸಿಕೊಂಡ ದಾಖಲೆ ಎಂದರೆ ಸಾಕ್ಷಿಯು ಅದು ಗೊತ್ತಿಲ್ಲ ಎಂದು ನುಡಿದಿರುವುದು ಎಂದರೆ ಸಾಕ್ಷಿಯು ನನ್ನ ತಾತನ ಆಸ್ತಿಯ ಬಗ್ಗೆ ಗೊತ್ತಿಲ್ಲ, ನನ್ನ ತಂದೆ ಹಾಗೂ ಚಿಕ್ಕಪ್ಪ ಸ್ವತ್ತನ್ನು ಹಂಚಿಕೊಂಡಿರುವುದು ಗೊತ್ತು ಎಂದು ನುಡಿಯುತ್ತಾರೆ. ನನ್ನ ತಂದೆ ಹಾಗೂ ಚಿಕ್ಕಪ್ಪ ಸ್ವತ್ತನ್ನು ಹಂಚಿಕೊಂಡಿರುತ್ತಾರೆ ಎನ್ನುವುದಕ್ಕೆ ಸಂಬಂಧಪಟ್ಟ ಯಾವುದೇ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರಪಡಿಸಿಲ್ಲ ಎಂದರೆ ಸರಿ . ಸದರಿ ದಾಖಲೆ ನಿಮ್ಮ ಬಳಿ ಇರುತ್ತದೆ ಎಂದರೆ ಸಾಕ್ಷಿಯು ಅದು ಇದೆಯೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ಪ್ರಸ್ತುತ ಬದುಕಿದ್ದಾರೆ. ಅವರು ನನ್ನ ಜೊತೆ ವಾಸವಿದ್ದಾರೆ .

ನಿಮ್ಮ ತಂದೆಯ ಬಳಿ ಈ ವಿಚಾರವನ್ನು ನೀವು ತಿಳಿದುಕೊಂಡಿಲ್ಲವೇ ಎಂದರೆ ಸಾಕ್ಷಿಯು ಅವರಿಗೆ ಏನು ತಿಳಿಯುವುದಿಲ್ಲ, ಅವರಿಗೆ ಕಿವಿ ಕೇಳಿಸುವುದಿಲ್ಲ ಎಂದು ನುಡಿಯುತ್ತಾರೆ. ಈ ದಾವೆಯನ್ನು ಹೂಡುವ ಪೂರ್ವದಲ್ಲಿ ಪ್ರತಿವಾದಿಯವರ ವಿರುದ್ದ ಪೋಲೀಸ್ ಠಾಣೆಗೆ ದೂರನ್ನು ಕೊಟ್ಟಿದ್ದೆನು. ಸದರಿ ದುಡಾರನ್ನು ನನ್ನ ಜಾಗ ಒತ್ತುವರಿಯಾಗಿದೆ ಹಾಗೂ ಗಲಾಟೆ ಮಾಡುತ್ತಾರೆ ಎಂದು ಕೊಟ್ಟಿದ್ದೆನು.

ನನ್ನ ಜಾಗ ಒತ್ತುವರಿಯಾಗಿದೆ ಎನ್ನುವುದಕ್ಕೆ ಸಂಬಂಧಪಟ್ಟಂತೆ ಪಂಚಾಯಿತಿಗೆ ಹಾಗೂ ತಾಲ್ಲೂಕು ಕಛೇರಿಗೆ ಅರ್ಜಿಯನ್ನು ಕೊಟ್ಟಿರುತ್ತೇನೆ. ಸದರಿ ಅರ್ಜಿಯ ಪ್ರತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

ಸದರಿ ಅರ್ಜಿಯಲ್ಲಿ ನನ್ನ ಎಷ್ಟು ಜಾಗವನ್ನು ಒತ್ತುವರಿ ಮಾಡಿರುತ್ತಾರೆಂದು ನಮೂದಿಸಿ ಕೊಟ್ಟಿಲ್ಲ. ನಿಮ್ಮ ಜಾಗ ಒತ್ತುವರಿಯಾಗಿದೆ ಎಂದು ನಿಮಗೆ ಹೇಗೆ ತಿಳಿಯಿತು ಎಂದರೆ ಸಾಕ್ಷಿಯು ನಮ್ಮ ಜಾಗವನ್ನು ಮುಂದಿನಿಂದ ನೋಡಿದರೆ ತಿಳಿಯುತ್ತದೆ ಎಂದು ನುಡಿಯುತ್ತಾರೆ . ಒತ್ತುವರಿಯಾಗಿದೆ ಎಂದು ನಾನು ಪೋಲೀಸ್ ಠಾಣೆಗೆ ದೂರನ್ನು ಕೊಟ್ಟಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನೀವು ಕೊಟ್ಟ ದೂರಿನ ಮೇರೆಗೆ ಪೋಲೀಸರು ಯಾವುದಾದರೂ ಕ್ರಮ ತೆಗೆದುಕೊಂಡಿದ್ದಾರೆ ಎಂದರೆ ಸಾಕ್ಷಿಯು ಪೋಲೀಸರು ಸ್ಥಳಕ್ಕೆ ಬಂದು ಹೊಂದಿ ಕೊಂಡು ಹೋಗಿ ಎಂದು ಹೇಳಿದರು. ಆದರೆ ಪ್ರತಿವಾದಿಯವರು ಒತ್ತುವರಿ ಮಾಡಿದ ಜಾಗವನ್ನು ಬಿಟ್ಟುಕೊಟ್ಟಿಲ್ಲ ಆದ್ದರಿಂದ ಈ ದಾವೆಯನ್ನು ಹೂಡಿರುವುದು ಎಂದು ನುಡಿಯುತ್ತಾರೆ.

ನಾನು ದಾವೆಯಲ್ಲಿ ಹೇಳಿರುವಂತೆ ಪ್ರತಿವಾದಿಯವರು ನನಗೆ ಯಾವುದೇ ತೊಂದರೆಯನ್ನು ಕೊಟ್ಟಿಲ್ಲ ಆದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-3 ರಲ್ಲಿ ಕಾಣಿಸುತ್ತಿರುವ ಹಸಿರು ಬಣ್ಣ ಹೊಡೆದಿರುವ ಜಾಗ 15 ಅಡಿಗಿಂತ ಹೆಚ್ಚು ಇದ್ದು, ಅದು ಕೇವಲ 15 ಅಡಿ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನ್ಯಾಯಾಲಯದ ಮೂಲಕ ಯಾರಾದರೂ ಇಂಜಿನಿಯರ್ ಅಥವಾ ನಿಯೋಗಿಯವರು ದಾವಾ ಅನುಸೂಚಿ ಸ್ವತ್ತಿನಲ್ಲಿ ನಿರ್ಮಾಣ ಮಾಡಲಾಗಿದೆ ಎನ್ನುವ ಕಟ್ಟಡವನ್ನು ಅಳತೆ ಮಾಡಲು ನನ್ನ ಯಾವುದೇ ತಕರಾರು ಇರುವುದಿಲ್ಲ. ನಿಪಿ-3 ರಲ್ಲಿ ಹಸಿರು ಬಣ್ಣ ಹೊಡೆದಿರುವ ಜಾಗ ಹಾಗೂ ಮೆಟ್ಟಿಲನ್ನು ಸೇರಿಸಿ ಒಟ್ಟು 19 ಅಡಿ ಇರುತ್ತದೆ. ಮಲ್ಲೇಶಪ್ಪರವರ ಜಾಗದ ಕಡೆಗೆ ನಮ್ಮ ಮೆಟ್ಟಿಲುಗಳ ನಂತರ 4 ಅಡಿ ಸೆಟ್ ಬ್ಯಾಕ್ ಬಿಟ್ಟಿರುತ್ತೇನೆ.

ನಾನು ಮನೆ ನಿರ್ಮಾಣ ಮಾಡಿಸುವ ಸಂದರ್ಭದಲ್ಲಿ 1 ನೇ ಪ್ರತಿವಾದಿಯ ಮನೆ ಕಡೆಗೆ ಆಗಲೀ , 2 ನೇ ಪ್ರತಿವಾದಿಯ ಸ್ವತ್ತಿನ ಕಡೆಯಾಗಲೀ ಯಾವುದೇ ಸೆಟ್ ಬ್ಯಾಕ್ ಅನ್ನು ಬಿಡದೇ ನಿರ್ಮಾಣ ಮಾಡಿದ್ದು ಈಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಯ ಮನೆಯ ಪಕ್ಕ ನನ್ನ ಮನೆಯ ನಡುವೆ ಇರುವ ಖಾಲಿ ಜಾಗ 1 ನೇ ಪ್ರತಿವಾದಿಗೆ ಸೇರಿದ್ದು ಎಂದರೆ ಸರಿಯಲ್ಲ. ನಾನೇ ಸೆಟ್ ಬ್ಯಾಕ್ ಅನ್ನು ಬಿಡದೇ ಪ್ರತಿವಾದಿಯವರಿಗೆ ತೊಂದರೆ ಕೊಡುತ್ತಿದ್ದೇನೆ ಹಾಗೂ ಅವರ ವಿರುದ್ಧವೇ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮನೆಯ ಸುತ್ತ ಆಗಲೀ ಹಾಗೂ ನನಗೆ ಸೇರಿದ್ದು ಎನ್ನುವ ಸ್ವತ್ತಿನ ಸುತ್ತ ಆಗಲೀ ಯಾವುದೇ ಕಾಂಪೌಂಡ್ ಇಲ್ಲ ಎಂದರೆ ಸರಿ . ನಾವು ಕಾಂಪೌಂಡ್ ನಿರ್ಮಾಣ ಮಾಡಲು ಮುಂದಾಗಿದ್ದೆವು ಆದರೆ ಆ ಸಮಯದಲ್ಲಿ ಪ್ರತಿವಾದಿಯವರು ತೊಂದರೆ ಕೊಟ್ಟಿರುತ್ತಾರೆ. ಮನೆ ನಿರ್ಮಾಣ ಮಾಡುವಾಗಲೂ ಕೂಡಾ ಪ್ರತಿವಾದಿಯವರು ತೊಂದರೆ ಕೊಟ್ಟಿರುತ್ತಾರೆ.

ನಾನು ಕಾಂಪೌಂಡ್ ನಿರ್ಮಿಸಲು ಮುಂದಾದಾಗ ಪ್ರತಿವಾದಿಯವರು ತೊಂದರೆ ಕೊಟ್ಟಿರುತ್ತಾರೆಂದು ದಾವಾ ಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿ . ನಿಪಿ-3 ರಲ್ಲಿ ಕಾಣಿಸುತ್ತಿರುವ ಸ್ವತ್ತಿನ ಯಾವ ಭಾಗದಿಂದ ಯಾವ ಭಾಗಕ್ಕೆ ಕಾಂಪೌಂಡ್ ನಿರ್ಮಾಣ ಮಾಡಬೇಕು ಎಂದು ಯಾವುದೇ ನಿಯೋಜನೆ ಇರಲಿಲ್ಲ.

ಕಾಂಪೌಂಡ್ ನಿರ್ಮಾಣ ಮಾಡಬೇಕು ಎಂದು ಅನುಮತಿಗಾಗಿ ಪಂಚಾಯಿ ,ಗೆ ಯಾವುದೇ ಅರ್ಜಿಯನ್ನು ಕೊಟ್ಟಿಲ್ಲ . ಯಾವುದೇ ಸ್ವತಿನಲ್ಲಿ ಕಾಂಪೌಂಡ್ ನಿರ್ಮಾಣ ಮಾಡಬೇಕಾದರೆ ಅನುಮತಿಯನ್ನು ಪಡೆದುಕೊಳ್ಳಬೇಕು ಎಂದು ಇದೆ ಎಂದರೆ ನನಗೆ ಗೊತ್ತಿಲ್ಲ. ಕಾಂಪೌಂಡ್ ನಿರ್ಮಾಣ ಮಾಡಲು ಮುಂದಾದಾಗ ಪ್ರತಿವಾದಿಯವರು ತೊಂದರೆ ಕೊಟ್ಟಿರುವುದು ಎಂದು ನೀವು ಸುಳ್ಳು ಹೇಳುತ್ತಿದ್ದು ನೀವು ಕಾಂಪೌಂಡ್ ನಿರ್ಮಾಣ ಮಾಡಲು ಮುಂದಾಗಿಲ್ಲ ಹಾಗೂ ಪ್ರತಿವಾದಿಯವರು ಯಾವುದೇ ರೀತಿ ತೊಂದರೆ ನೀಡಿಲ್ಲ ಎಂದರೆ ಸಾಕ್ಷಿಯು ನಾವು ಕಾಂಪೌಂಡ್ ನಿರ್ಮಾಣ ಮಾಡಲು ಮುಂದಾಗಿದ್ದೆವು ಎಂದು ನುಡಿಯುತ್ತಾರೆ.

ನಿಪಿ-3 ರಿಂದ 6 ರ ಫೋಟೋಗಳನ್ನು ನಾನೇ ತೆಗೆದಿರುವುದು ಅವುಗಳನ್ನು ನನ್ನ ಮೊಬೈಲ್ ನಿಂದ ತೆಗೆದಿರುವುದು. ನಾನು ಸದರಿ ಫೋಟೋಗಳನ್ನು ನನ್ನ ಮೊಬೈಲ್ ನಿಂದ ತೆಗೆದು ನಂತರ ಇಂತಹ ಸ್ಟುಡಿಯೋದಲ್ಲಿ ಅದನ್ನು ಪ್ರಿಂಟ್ ಮಾಡಿಸಿರುತ್ತೇನೆಂದು ಯಾವುದೇ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ .

ನಾನು ದಾವೆಯಲ್ಲಿ ಕೇಳಿರುವ ಯಾವುದೇ ಪರಿಹಾರವನ್ನು ಪಡೆಯಲು ಅರ್ಹನಲ್ಲ, ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಅನುಸೂಚಿಯಲ್ಲಿ ತೋರಿಸಿರುವ ಅಳತೆಯ ಸ್ವತ್ತಿನ ಮೇಲೆ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸರ್ಕಾರಿ ಸ್ವತ್ತನ್ನು ದಾವಾ ಅನುಸೂಚಿಯಲ್ಲಿ ಸೇರಿಸಿ ಈ ದಾವೆಯನ್ನು ಹೂಡಿರುವುದರಿಂದ ನಾನು ಯಾವುದೇ ಪರಿಹಾರವನ್ನು ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸ.ಇ.

(ಚೇತನಾ )
2 ನೇ ಅಪರ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಭದ್ರಾವತಿ.